# ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

ಶಿರಸಿ: ಕದಂಬ ಚಾರಿಟೇಬಲ್ ಫೌಂಡೇಶನ್ ವಿದ್ಯಾರ್ಥಿಗಳಿಗೆ ಕದಂಬ ಸ್ಕಾಲರ್‌ಶಿಪ್ ಕಾರ್ಯಕ್ರಮವನ್ನು ಜಾರಿಗೆ ತಂದಿದೆ.

2009ನೇ ಸಾಲಿನಲ್ಲಿ ಶೇಕಡಾ 70ಕ್ಕಿಂತ ಹೆಚ್ಚು (ಪ್ರಥಮ ಶ್ರೇಣಿ) ಹಾಗೂ ಶೇ. 55ರಿಂದ 69ರವರೆಗೆ (ದ್ವಿತೀಯ ಶ್ರೇಣಿ) ಅಂಕ ಗಳಿಸಿದ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಪ್ರಥಮ ಶ್ರೇಣಿಗೆ ರೂ. 300 ಶುಲ್ಕ ಹಾಗೂ ದ್ವಿತೀಯ ಶ್ರೇಣಿಗೆ ರೂ. 500 ಶುಲ್ಕ ನಿಗದಿಪಡಿಸಲಾಗಿದೆ. ಯೋಜನೆ ಅಡಿಯಲ್ಲಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು 2010ರ ವಾರ್ಷಿಕ ಪರೀಕ್ಷೆಯಲ್ಲಿ ಶೇ. 85ಕ್ಕಿಂತ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದರೆ ಪಿಯುಸಿ ಮಟ್ಟದಲ್ಲಿ ಪ್ರತಿ ತಿಂಗಳು ರೂ. ಒಂದು ಸಾವಿರದಂತೆ 20 ತಿಂಗಳು ಹಾಗೂ ಪದವಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. ಒಂದು ಸಾವಿರದಂತೆ 30 ತಿಂಗಳು ವಿದ್ಯಾರ್ಥಿವೇತನ ಲಭ್ಯವಾಗಲಿದೆ.

300 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದ್ದು. ಆಸಕ್ತರು ಕದಂಬ ಚ್ಯಾರಿಟೇಬಲ್ ಫೌಂಡೇಶನ್, ಚೌಕಿಮಠ ರಸ್ತೆ, ಶಿರಸಿ (ದೂರವಾಣಿ-08384-225 248, 9980499696) ಈ ವಿಳಾಸವನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಭಾನುವಾರ 26ನೇ ಸೆಪ್ಟೆಂಬರ್ 2010